ಆ. ಅನಧಿಕೃತ ಗಣಿಕೈಗಾರಿಕೆಗಳನ್ನು ನಿಲ್ಲಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಶ್ರೀ. ಧರಂ ಸಿಂಗ್ (ಮುಖ್ಯ ಮಂತ್ರಿಗಳು) :

ಅ. ಒಟ್ಟು 137.

	ಸರ್ಕಾರಿ	ಪಟ್ಟಾ
ಗ್ರಾನೈಟ್ (ನಿರ್ದಿಷ್ಟ)	37	42
ಕಟ್ಟಡದ ಕಲ್ಲು (ಅನಿರ್ದಿಷ್ಟ)	58	–

ಆ. ಯಾವುದೇ ಅಕ್ರಮ ಗಣಿಗಾರಿಕೆ ನಡೆದಿರುವುದು ಗಮನಕ್ಕೆ ಬಂದಿರುವುದಿಲ್ಲ. ಆದಾಗ್ಯೂ ಅಕ್ರಮ ಸಾಗಾಣಿಕೆ ಪ್ರಕರಣಗಳನ್ನು ಪತ್ತೆ ಹಚ್ಚಿ 2003–04 ರಲ್ಲಿ 3,982 ಪ್ರಕರಣಗಳಲ್ಲಿ ರೂ.3,84,110–00 ಮತ್ತು 2004–05 ರಲ್ಲಿ 2,873 ಪ್ರಕರಣಗಳಲ್ಲಿ ರೂ. 2,46,546/– ದಂಡ ವಸೂಲಿ ಮಾಡಲಾಗಿದೆ.

1564(2019) ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಪೋಲೀಸ್ ಠಾಣೆಗಳಲ್ಲಿ ವಾರಸುದಾರರಿಲ್ಲದೆ ವಶಪಡಿಸಿಕೊಂಡಿರುವ ವಾಹನಗಳ ವಿನಾಕಾರಣ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಇವುಗಳನ್ನು ವಿಲೇವಾರಿ ಮಾಡದೆ ಹಾಗೆ ಇಟ್ಟುಕೊಳ್ಳುವುದರಿಂದ ಸರ್ಕಾರಕ್ಕಾಗುವ ಲಾಭವೇನು?

ಇ. ಅರಣ್ಯ ಇಲಾಖೆಯಲ್ಲಿ ಈ ರೀತಿ ವಾರಸುದಾರರಿಲ್ಲದ ವಾಹನಗಳನ್ನು ಬಹಿರಂಗ ಹರಾಜು ಮಾಡುವಂತೆ ಪೋಲೀಸ್ ಇಲಾಖೆಯಲ್ಲಿಯೂ ಹರಾಜು ಮಾಡಲು ಸರ್ಕಾರಕ್ಕಿರುವ ತೊಂದರೆಗಳೇನು?

ಈ. ಈ ಬಗೆಗಿನ ಕಾನೂನಿಗೆ ಸೂಕ್ತ ತಿದ್ದುಪಡಿ ಮಾಡಲು ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಗಳು)

ಅ. ಬಂದಿದೆ.

ಆ. ಸರ್ಕಾರಕ್ಕೆ ಲಾಭವಿಲ್ಲ.

ಇ. ಪೋಲೀಸ್ ಇಲಾಖೆಯಲ್ಲಿ ವಾರಸುದಾರರಿಲ್ಲದ ವಾಹನಗಳನ್ನು ಹರಾಜು ಮಾಡಲು ನ್ಯಾಯಾಲಯದ ಅನುಮತಿ ಪಡೆದು ಅವುಗಳನ್ನು ಹರಾಜು ಮಾಡಿ ಬಂದ ಹಣವನ್ನು ಸರ್ಕಾರದ ಬೊಕ್ಕಸಕ್ಕೆ ಜಮಾ ಮಾಡಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ.

ಈ. ಅವಶ್ಯವೆನಿಸಿದ್ದಲ್ಲಿ ತಿದ್ದುಪಡಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

1565(1890) ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ (ಹುನಗುಂದ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಕೃಷ್ಣಾ ಮೇಲ್ದಂಡೆ ಯೋಜನೆಯ ನಾರಾಯಣಪುರ ಜಲಾಶಯದ ಸಲುವಾಗಿ 1970 ರಿಂದ 1982 ರವರೆಗೆ ಭೂ ಸ್ವಾಧೀನ ಪಡಿಸಿಕೊಂಡಿರುವ ಕಾರ್ಯ ಪೂರ್ಣಗೊಂಡಿದೆಯೆ ;

2. ಪೂರ್ಣಗೊಳ್ಳದಿದ್ದಲ್ಲಿ ಕಾರಣಗಳೇನು ;

3. 1996–97 ರವರೆಗೆ ಸಂಪೂರ್ಣ ನೀರು ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;